# ನಗೆಯು ಬರುತಿದೆ ಎನಗೆ ನಗೆಯು ಬರುತಿದೆ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 305.
2. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao, page No. 139.
3. **Ref.:** Shri Purandara Dasara Sahitya Part – 4, Loka Neeti, edited by Shri Betageri Krishna Sharma and Shri Bengeri Huchha Rayaru, page No. 106.
4. **Note:** Lyrics given here are as per Ref. 1. The wordings in Ref. 2 are same as in Ref. 1. The wordings in Ref. 3 are slightly different and are not considered here.
5. **Note:** The singer has followed these lyrics, as in Ref. 1.

ರಾಗ: ಶಂಕರಾಭರಣ ತಾಳ: ರೂಪಕ

ನಗೆಯು ಬರುತಿದೆ, ಎನಗೆ
ನಗೆಯು ಬರುತಿದೆ || ಪ ||

ಜಗದೊಳಿರುವ ಮನುಜರೆಲ್ಲ
ಹಗರಣ ಮಾಡುವುದ ಕಂಡು || ಅಪ ||

ಪರರ ವನಿತೆಯೊಲುಮೆಗೊಲಿದು
ಹರುಷದಿಂದ ಅವಳ ಬೆರೆದು
ಹರಿವ ನೀರಿನೊಳಗೆ ಮುಳುಗಿ
ಬೆರಳ ಎಣಿಸುತಿಹರ ಕಂಡು || 1 ||

ಪತಿಯ ಸೇವೆ ಬಿಟ್ಟು, ಪರ
ಪತಿಯ ಕೂಡೆ ಸರಸವಾಡಿ
ಸತತ ಮೈಯ ತೊಳೆದು ಹಲವು
ವ್ರತವ ಮಾಳ್ಪ ಸತಿಯ ಕಂಡು || 2 ||

ಕಾಮ ಕ್ರೋಧ ಮನದೊಳಿಟ್ಟು
ತಾನು ವಿಷಯ ಪುಂಜನಾಗಿ
ಸ್ವಾಮಿ ಪುರಂದರ ವಿಠ್ಠಲನ್ನ
ನಾಮ ನೆನೆಯುವವರ ಕಂಡು || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಜಗತ್ತಿನ ಎಲ್ಲರೂ ಒಂದಲ್ಲ ಒಂದು ಬಗೆಯ ಹಗರಣ (ನಾಟಕ)ದಲ್ಲಿ ಪಾತ್ರಧಾರಿಗಳೇ ಆಗಿದ್ದಾರೆ. ವ್ರತ, ಆಚಾರ, ಧ್ಯಾನ ಇವು ಬಹಿರಂಗ ವೇಷ ಭೂಷಣಗಳು. ಆದರೆ ಅವರ ಮನಸ್ಸು ಪರವನಿತೆಯರಲ್ಲಿ ಆಸಕ್ತವಾಗಿರುತ್ತದೆ. ಮನಸ್ಸಿನಲ್ಲಿ ಹೀನಗುಣ ಇರುತ್ತದೆ. ಒಳಗೆ ವಿಷ ತುಂಬಿಕೊಂಡಿರುತ್ತದೆ. ಹೀಗೆ ಅಂತರಂಗ–ಬಹಿರಂಗ ಎರಡೂ ರಂಗಗಳಲ್ಲಿ ಆಯಾ ಸಂದರ್ಭಕ್ಕೆ ತಕ್ಕ ವೇಷ ಹಾಕುವ ಹಗರಣಿಗರನ್ನು ಕಂಡು ಪುರಂದರ ದಾಸರು ನಗುತ್ತಿದ್ದಾರೆ.

**ಪುಂಜ** = ಸಮೂಹ

**ಬೆರಳನೆಣಿಸುತಿಹರ** – ಜಪ ಮಾಡುತ್ತಿರುವವರನ್ನು.

**ಮೌನಿ** – ಹೃದಯದೊಳಗೇ ಪ್ರೇರಕನಾಗಿ, ನಿಯಾಮಕನಾಗಿ ಆದರೆ ಕೇವಲ ಸಾಕ್ಷಿಯಾಗಿ (ಮೌನಿ) ಇರುವ ಬಿಂಬರೂಪಿ ಪರಮಾತ್ಮ.

**Classification:** Keerthane
**Ankita:** purandara vittala
**Location:** NA
**Category:** swabhava vishleshane, samsara chitranagalu, uggadane, Loka Neeti
**Sub-Category:** nage, loka, patni, olume, niru, pati, vrata, sittu, Dhyana, kama, mana, nara, hengasu, santosha, patni,
**Pravachana:** NA
**Explanation:** Dr. A.B. Shamachar